

# ಬಣ್ಣ ಬಳಿದವರು!

ನಮ್ಮಲ್ಲಿ ಮೊಹರಂ ಆಚರಿಸುವ ಪದ್ಧತಿ ಹಿಂದಿನಿಂದಲೂ ಇದೆ. ಈ ಸಂದರ್ಭದಲ್ಲಿ ದೇವರಿಗೆ ಹರಕೆ ಹೊತ್ತವರು ಮೈಗೆ ಹುಲಿ ಬಣ್ಣ, ರಕ್ಕಸರ ಬಣ್ಣ, ಚಿತ್ರ ವಿಚಿತ್ರ ಬಣ್ಣ ಮತ್ತು ವೇಷಭೂಷಣಗಳನ್ನು ಹಾಕಿಕೊಂಡು ಜನರನ್ನು ರಂಜಿಸುತ್ತಾರೆ.

ಆದರೆ ವಿದೇಶಗಳಲ್ಲಿ ಪ್ರಾಣಿಗಳ ಬಣ್ಣವನ್ನು ಮೈಗೆ ಬಳಿದುಕೊಳ್ಳಲು ಮೊಹರಂ ಹಬ್ಬವೇ ಬರಬೇಕೆಂದೇನಿಲ್ಲ. ಅವರಿಗೆ ಇಷ್ಟವಾದಾಗಲೆಲ್ಲ ತಮಗಿಷ್ಟವಾದ ಪ್ರಾಣಿಗಳ ಬಣ್ಣವನ್ನು ಬಳಿದುಕೊಂಡು ಖುಷಿ ಪಡುತ್ತಾರೆ. ಕೆಲವೊಮ್ಮೆ ಹೊಟ್ಟೆಪಾಡಿಗಾಗಿ ಅಥವಾ ಇನ್ನೊಬ್ಬರ ಇಷ್ಟಕ್ಕಾಗಿಯೂ ಬಣ್ಣ ಬಳಿದುಕೊಳ್ಳುತ್ತಾರೆ.

ಸ್ಯಾನ್‌ಫ್ರಾನ್ಸಿಸ್ಕೋದ ಲ್ಯಾನೆಟ್ಟೇ ನೆವೆಲ್ ಎನ್ನುವ ಪ್ರಸಿದ್ಧ ಛಾಯಾಗ್ರಾಹಕಿಗೆ ಚಿಕ್ಕಂದಿನಿಂದಲೂ 'ಬಾಡಿ ಪೇಂಟಿಂಗ್' ಹುಚ್ಚು. ಮಾಡೆಲ್‌ಗಳ ದೇಹಗಳ ಮೇಲೆ ಈಕೆಯ ಕೈ ಬಣ್ಣಗಳೊಂದಿಗೆ ಸರಾಗವಾಗಿ ಆಟವಾಡುತ್ತದೆ.

ಥೇಟ್ ಕಾಡು ಪ್ರಾಣಿಗಳನ್ನೇ ಹೋಲುವಂತೆ ಮಾಡೆಲ್‌ಗಳನ್ನು ಬಣ್ಣದಲ್ಲಿ ಅದ್ದಿ, ಪ್ರಾಣಿಗಳ ಪಕ್ಕದಲ್ಲೇ ನಿಲ್ಲಿಸಿ ಫೋಟೋ ಕ್ಲಿಕ್ಕಿಸುವುದರಲ್ಲಿ ಈಕೆ ಎಕ್ಸ್‌ಪರ್ಟ್. ಈಕೆ ತೆಗೆದ ಇಂತಹ ಅಪರೂಪದ, ಧೈರ್ಯಶಾಲಿ ಚಿತ್ರಗಳು ಲಾಸ್ ಏಂಜಲೀಸ್ ಮತ್ತು ಕ್ಯಾಲಿಫೋರ್ನಿಯಾಗಳಲ್ಲಿ ಆಗಾಗ್ಗೆ ಪ್ರದರ್ಶನ ಕಾಣುತ್ತಿವೆ. ಈಕೆಯ ಚಿತ್ರಗಳ ಪ್ರದರ್ಶನಕ್ಕಾಗಿ ಜನರು ಕಾಯುವುದೂ ಉಂಟು.

■ ವಸಂತ ಮಾಲವಿ



